# ಎಸಿಟಿ ಫೈಬರ್‌ನೆಟ್ ಬ್ರ್ಯಾಂಡ್ ಬಿಡುಗಡೆ

ಫೈಬರ್‌ನಿಂದ ಮನೆಗೆ ತಂತ್ರಜ್ಞಾನದ ಎಫ್‌ಟಿಟಿಎಚ್ ಪ್ರವರ್ತಕ ಹಾಗೂ ವಯರ್ಡ್ (ತಂತಿರಹಿತ) ಬ್ರಾಡ್‌ಬ್ಯಾಂಡ್ ವರ್ಗದಲ್ಲಿ ದೇಶದ ನಾಲ್ಕನೆ ಅತಿದೊಡ್ಡ ಇಂಟರ್‌ನೆಟ್ ಸೇವೆ ಒದಗಣೆದಾರ ಎಸಿಟಿ( ಆಟ್ರಿಯಾ ಕನ್ವರ್ಜೆನ್ಸ್ ಟೆಕ್ನಾಲಜೀಸ್ ಪ್ರೈ.ಲಿ) ಉದ್ದಿಮೆಯಲ್ಲಿ ಕಾರ್ಯತಾಂತ್ರಿಕ ಯೋಜನೆಯಾಗಿ ತನ್ನ ಹೊಸ ಬ್ರಾಡ್‌ಬ್ಯಾಂಡ್ ಬ್ರ್ಯಾಂಡ್ ಎಸಿಟಿ ಫೈಬರ್‌ನೆಟ್ ಬಿಡುಗಡೆಯನ್ನು ಪ್ರಕಟಿಸಿದೆ.

ಈ ಹೊಸ ಬ್ರ್ಯಾಂಡ್, ಗ್ರಾಹಕರಿಗೆ ಫೈಬರ್ ಆಪ್ಟಿಕ್ಸ್‌ನ ಸೀಮಾತೀತ ತಂತ್ರಜ್ಞಾನದ ಮೂಲಕ ಅತ್ಯಂತ ವೇಗದ, ಅತ್ಯಂತ ಸಮಂಜಸವಾದ ಮತ್ತು ಸರಿಸಾಟಿಯಿಲ್ಲದ ಇಂಟರ್‌ನೆಟ್ ಸೇವೆಗಳನ್ನು ಒದಗಿಸುವ ತನ್ನ ಬದ್ಧತೆಯನ್ನು ಮತ್ತಷ್ಟು ದೃಢಪಡಿಸುತ್ತದೆ. ರೀಟೈಲ್ ವಿಭಾಗದಲ್ಲಿ ಯಾವುದೇ ಇತರ ಸಂಸ್ಥೆ ಒದಗಿಸದಿರುವ ಅತ್ಯಂತ ವೇಗದ 60ಎಂಬಿಪಿಎಸ್ ಯೋಜನೆಯ ಬಿಡುಗಡೆಯೊಂದಿಗೆ ಕಂಪನಿಯು ತನ್ನ ಪ್ರಗತಿಪರ ಚಿಂತನೆ ಮತ್ತು ಸದಾ ಮುಂಚೂಣಿಯಲ್ಲಿರಬೇಕೆಂಬ ತತ್ವಕ್ಕೆ ಅನುಗುಣವಾಗಿ ನಡೆದುಕೊಂಡಿದೆ.

ತನ್ನ ಪ್ರಸಕ್ತ ಗ್ರಾಹಕರನ್ನು ಗಮನದಲ್ಲಿಟ್ಟುಕೊಂಡು, ಗ್ರಾಹಕರು ತಮ್ಮ ಈಗಿನ ಪ್ಲಾನ್‌ಗಳನ್ನು ಉನ್ನತೀಕರಿಸಿಕೊಂಡು ಯಾವುದೇ ಹೆಚ್ಚುವರಿ ಖರ್ಚಿಲ್ಲದೆ ಹೆಚ್ಚಿನ ಬ್ರ್ಯಾಂಡ್‌ವಿಡ್ತ್ ಯೋಜನೆ ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಿದೆ.